**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿರಿ.**

1. ರಂಜಾನ್ ಹಬ್ಬದ ಸಡಗರವು ಯಾವಾಗ ಶುರುವಾಗುತ್ತದೆ?

   **ಉತ್ತರ :** ಚಾಂದ್(ಚಂದ್ರ) ಮುಖದೋರಿದ ಮೇಲೆ ಹಬ್ಬದ ಸಡಗರಗಳು ಶುರುವಾಗುತ್ತವೆ.

2. ರಂಜಾನ್ ಹಬ್ಬದ ಸಮಯದಲ್ಲಿ ತಯಾರಿಸುವ ಖಾದ್ಯಗಳಾವುವು?

   **ಉತ್ತರ :** ರಂಜಾನ್ ಹಬ್ಬದ ಖಾದ್ಯಗಳು, ರುಚಿಯಾದ ಗುಲ್‌ಗುಲೆ ಮತ್ತು ರಹಮ್, ಹಾಲಿನಿಂದ ತಯಾರಿಸಿದ ಸುರಕುಂಬಾ.

3. ಮುಸ್ಲಿಂಯೇತರ ಗೆಳತಿಯರು ಮುಸ್ಲಿಂ ಸೋದರಿಯರಿಗಾಗಿ ಯಾವ ಕೂಟವನ್ನು ಏರ್ಪಡಿಸುತ್ತಿದ್ದರು?

   **ಉತ್ತರ :** ಮುಸ್ಲಿಂಯೇತರ ಗೆಳತಿಯರು ಮುಸ್ಲಿಂ ಸೋದರಿಯರಿಗಾಗಿ **'ಇಫ್ತಿಯಾರ್'** ಕೂಟವನ್ನು ಏರ್ಪಡಿಸುತ್ತಿದ್ದರು

4. ಬಸವಕೇಂದ್ರದವರು ನಾಗರ ಪಂಚಮಿಯ ದಿನ ಮೈಕಿನಲ್ಲಿ ಏನೆಂದು ಹೇಳಿ ಜಾಗೃತಿ ಮೂಡಿಸುತ್ತಿದ್ದರು?

   **ಉತ್ತರ** : ಬಸವಕೇಂದ್ರದವರು ನಾಗರಪಂಚಮಿಯ ದಿನ ಹುತ್ತದ ಹತ್ತಿರ ದೊಡ್ಡ ಬಗೋಣಿಯಿಟ್ಟುಕೊಂಡು **'ಹುತ್ತಕ್ಕೆ ಸುರಿದ ಹಾಲು ಹಾವು ಕುಡಿಯುವುದಿಲ್ಲ'** ಎಂದು ಮೈಕಿನಲ್ಲಿ ಹೇಳುತ್ತಾ ಜಾಗೃತಿ ಮೂಡಿಸುತ್ತಿದ್ದರು.

5. ಹೆಂಗಸರು ಗೋಲಾಗಿ ನಿಂತು ಹಾಡುತ್ತಿದ್ದ ಭುಲಾಯಿ ಹಾಡು ಯಾವುದು?

   **ಉತ್ತರ :** ಹೈದರಾಬಾದ್ ಕರ್ನಾಟಕದ ಹೆಣ್ಣುಮಕ್ಕಳು ಗಂಡನಮನೆಯ ನಾಲ್ಕು ಗೋಡೆಗಳನಡುವೆ ಎಷ್ಟೆಲ್ಲಾ ನಿರ್ಬಂಧಗಳಲ್ಲಿ ಬದುಕು ಸೆಣಸುತ್ತ ಜಿಂದಗಾಣಿಯನ್ನು ಮುನ್ನಡೆಸುತ್ತಿದ್ದರು. ಅವರ ಸಂಕಟ–ನೋವುಗಳು, ಸುಖ–ಸಂತೋಷಗಳು, ಭುಲಾಯಿಗಳಲ್ಲಿ ಹಾಡುಗಳಾಗಿ ಬರುತ್ತಿದ್ದವು. ಎಲ್ಲರೂ ಕೈಕೈ ಹಿಡಿದುಕೊಂಡು ಗೋಲಾಗಿ ನಿಂತರು. ಹಾಡು ಮೊದಲುಗೊಂಡಿತು.

   ನಾಗರಪಂಚಮಿ ನಾಡಿನ್ಯಾಗ<br>
   ನಾರ್‍ಯಾರ ಹಬ್ಬ ಏನು ಹುಬ್ಬ। ಸುವ್ವನಾರಿ॥<br>
   ಹಂಚಿಕೇನು ಮಾಡಲಿ ತಂಗಿ<br>
   ಎಚ್ಚ ತರಲಾಕ। ಈಗ<br>
   ಮುಂಚಿನಂಗ ದಿನಮಾನಿಲ್ಲ<br>
   ಎಲ್ಲಾ ಮಾಡೊದಕ। ಸುವ್ವನಾರಿ॥